# ಚಂಚಲ ಮನಸ್ಸು

**ಭೀಮಣ್ಣ ಎಚ್.**
ಸಹ ಪದ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಫರಹತಾಬಾದ.

**Received: 06-05-2024 ; Acepted: 10-07-2024 ; Published: 11-08-2024**

**DOI: https://doi.org/10.5281/zenodo.13284183**

**ABSTRACT:**

ಮನಸ್ಸು ಹರಿಯುವ ನೀರು ಇದ್ದಹಾಗೆ ಸದಾ ಕಾಲ ಚಲಿಸುತ್ತದೆ. ಮನಸ್ಸನ್ನು ಕುರಿತು ಹಲವು ಜ್ಞಾನಿಗಳು, ಶರಣರು ತಮ್ಮದೇ ಆದ ದೃಷ್ಟಿಕೋನದಲ್ಲಿ ವಿವರಿಸಿದ್ದಾರೆ. ಯಾರು ತಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತಾರೋ ಅವರು ಈ ಜಗದ ಯಾವ ಶಕ್ತಿಯನ್ನು ಗೆಲ್ಲಬಲ್ಲರು ಚಂಚಲವಾದ ಮನಸ್ಸು ಮನುಷ್ಯನ ಸುಖವನ್ನು ಹಾಳುಮಾಡುತ್ತದೆ. ಹುಡುಕಾಟದ ಹಾದಿಯಲ್ಲಿ ನೆಮ್ಮದಿಯೂ ಕೂಡ ಕಳೆದುಕೊಳ್ಳುತ್ತದೆ. ಯಾವುದು ಸತ್ಯ ಯಾವುದು ಸುಳ್ಳು ಎಂದು ಅರಿಯದೆ ಕೊನೆಗೆ ತನ್ನತನವನ್ನು ಕಳೆದುಕೊಂಡು ಹಾಳಾಗುತ್ತದೆ. ಹೀಗೆ ಬಲ್ಲವರು ಮನಸ್ಸನ್ನು ಕುರಿತು ಅಧ್ಯಯನ ಮಾಡಿ ಮನುಷ್ಯನ ಸುಖ ಶಾಂತಿ ಕಾಪಾಡುವಲ್ಲಿ ಮನಸ್ಸು ಹರಿ ಬಿಟ್ಟರೆ ಮನುಷ್ಯ ಜೀವನವೇ ಹಾಳಾಗುತ್ತದೆ ಎಂದು ಹೇಳುತ್ತಾರೆ. ಯಾರು ತಮ್ಮ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳುತ್ತಾರೋ ಅವರು ಮಹಾನ್ ವ್ಯಕ್ತಿಗಳಾಗುತ್ತಾರೆ ಎಂದು ಹಲವು ಮಹಾನ್ ವ್ಯಕ್ತಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

**KEYWORDS:**

ಮನಸ್ಸು , ಸರ್ವಜ್ಞ, ಮಾಯೆ, ಅಲ್ಲಮ ಪ್ರಭು, ಆಸೆ.

ಸರ್ವಜ್ಞನು ಒಂದು ವಚನದಲ್ಲಿ ಮನಸ್ಸನ್ನು ಕುರಿತು ಹೀಗೆ ಹೇಳುತ್ತಾನೆ:

**"ಕರಿಯದೆಲೆ ಬರುವವನ ಬರೆಯದೆಲೆ ಓದುವವನ**
**ಬರಿ ಗಾಳಿನಿಂದ ನಡೆವವನ ಕರೆತಂದು**
**ಕೆರದಿ ಹೊಡೆಯೆಂದ ಸರ್ವಜ್ಞ"**

ಮನಸ್ಸನ್ನು ಕುರಿತು ಸರ್ವಜ್ಞನು ಹೇಳುವ ಪರಿ ವಿಶಿಷ್ಟವಾದದ್ದು. ಒಬ್ಬ ವ್ಯಕ್ತಿಯ ಮನಸ್ಸನ್ನು ಚಂಚಲತೆಯಲ್ಲಿ ಮುಳುಗಿದ್ದಾಗ ಅವನು ಏನು ಮಾಡುತ್ತೇನೆ ಎಂಬುವುದು ಹರಿಯಲು ಕೂಡ ಸಾಧ್ಯವಿಲ್ಲ. ಕಡಿವಾಣವಿಲ್ಲದ ಕುದುರೆಯಂತೆ ಚಲಿಸುವ ಮನಸ್ಸನ್ನು ಕರೆಯದೆ ಬರುವವನು ಎನ್ನುವರು, ಮನಸ್ಸಿಗೆ ಯಾರೂ ಕರೆಯಬೇಕಾಗಿಲ್ಲ ಅದು ಯಾವಾಗಲೂ ಮನುಷ್ಯನ ದೇಹದಿಂದ ಹೊರಗೆ ಸಂಚಾರ ಮಾಡುತ್ತಲೇ ಇರುತ್ತದೆ. ನನ್ನ ಕೈಗೆ ಸಿಗದೇ ಇರುವುದನ್ನು ಜೊತೆಗೆ ವಿಚಿತ್ರವಾದ ವಿಚಾರಗಳನ್ನು ಸುತ್ತಿಕೊಂಡು ಆಸೆ ಪಡುತ್ತಲೇ ಇರುತ್ತದೆ. ತಾನು ಬಯಸಿದ ವಸ್ತು ಸಿಗದೇ ಇದ್ದಾಗ ತನ್ನನ್ನು ತಾನೇ ಹುಟ್ಟು

ಕೊಳ್ಳುವಷ್ಟರ ಮಟ್ಟಿಗೆ ಹಾಳಾಗಿ ಹೋಗುತ್ತದೆ. ತಾನು ಮಾಡದೆ ಇರುವ ವಿಷಯವನ್ನು ಕುರಿತು ಹೇಳುವಲ್ಲಿ ಬರೆದೆ ಓದುವ ಎನ್ನುತ್ತಾರೆ. ತಾನು ಸೃಷ್ಟಿಸದೇ ಇರುವ ವಿಷಯವನ್ನು ಅಥವಾ ನಾನು ಓದದೆ ಇರುವ ವಿಷಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅದಕ್ಕೆ ಕೊಟ್ಟು ಬಿದ್ದು ನಾನೇ ಮಾಡಿರುವುದು ಎಂದು ಹೇಳುತ್ತಾ ತನ್ನ ತಾನೇ ಹೆಮ್ಮೆ ಪಡುತ್ತಾ ಇರುತ್ತದೆ. ಇಂಥ ಮನಸ್ಸನ್ನು ಸರ್ವಜ್ಞ ಅಲ್ಲಗಳೆಯುತ್ತಾರೆ. ಗರ್ವ ಅಹಂಕಾರದಿಂದ ಕೂಡಿದ ಮನಸ್ಸು ಯಾವತ್ತೂ ಸುಖ ಶಾಂತಿ ಬಯಸಲಾರದು ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಬಿಸಿಲು ಕುದುರೆ ಹತ್ತಿದ ಮನಸ್ಸು ನೆಮ್ಮದಿ ತನ್ನ ತಾನೇ ಹಾಳು ಮಾಡಿಕೊಳ್ಳುತ್ತದೆ. ಮನಸ್ಸು ಸದಾ ಕಾಲ ಬರಿಗಾಲಿನಿಂದಲೇ ಸಂಚಾರ ಮಾಡುತ್ತದೆ. ಕಲ್ಲು, ಮುಳ್ಳು, ಸುಖ, ಶಾಂತಿ ಎನ್ನದೆ ಹಗಲು ರಾತ್ರಿಯಲ್ಲಿ ಸಂಚಾರ ಮಾಡುತ್ತಲೇ ಇರುತ್ತದೆ. ಭೂಮಿಯ ಮೇಲೆ ಕಾಲೂರದೆ ತಿರುಗುತ್ತಲೇ ಇರುವ ಮನಸ್ಸನ್ನು ಸರ್ವಜ್ಞನು ಸ್ಪಷ್ಟವಾಗಿ ಕಟ್ಟಿ ಹಾಕಬೇಕು ಎಂದು ಹೇಳುತ್ತಾನೆ. ಒಂದು ವೇಳೆ ಅಂತ ಮನಸ್ಸನ್ನು ಮನುಷ್ಯನ ದೇಹದಲ್ಲಿ ಇದ್ದರೆ ಅವರಿಗೆ ಕೆರ ತಗೊಂಡು ಹೊಡೆಯಬೇಕು ಎಂದು ನುಡಿಯುತ್ತಾರೆ. ಇಲ್ಲಿ ಮನಸ್ಸು ಎಂಬುವುದು ಮಂಗಗಳ ಸ್ವಭಾವವನ್ನು ಹೋಲುತ್ತದೆ. ಸದಾ ಕಾಲ ಅದು ಆಸೆಯಲ್ಲಿಯೇ ಮುಳುಗಿರುತ್ತದೆ. ಇಲ್ಲದ್ದನ್ನು ಬಯಸುತ್ತದೆ. ನಾನು ಶ್ರೇಷ್ಠ ಎಂದು ನುಡಿಯುತ್ತದೆ. ತಾನು ಬಯಸಿದ್ದು ಸಿಗದೇ ಇದ್ದಾಗ ಎಲ್ಲವನ್ನು ಕಳೆದುಕೊಂಡು ಒಣಗಿದ ಮರಕ್ಕೆ ಜೂತುಬಿದ್ದ ಹಾಗೆ ಸಪ್ಪಗಾಗುವುದು. ಮನುಷ್ಯನ ಮನಸ್ಥಿತಿ ಒಂದೇ ನೆಲೆಯಿಂದ ಕೂಡಿರುವುದಿಲ್ಲ. ಒಂದು ವೇಳೆ ಅವನ ಮನಸ್ಸು ಒಂದೇ ರೀತಿಯಿಂದ ಚಿಂತಿಸುವುದಾದರೆ ಶರಣನಾಗುತ್ತಾನೆ, ಮಹಾಜ್ಞಾನಿ ಆಗುತ್ತಾನೆ. ಅದಕ್ಕಾಗಿ ಅಲ್ಲಮಪ್ರಭುದೇವರು ಮನಸ್ಸನ್ನು ಕುರಿತು ಒಂದು ವಚನದಲ್ಲಿ ಮಾಯೆಗೆ ಹೋಲಿಸುತ್ತಾರೆ. ಮನಸ್ಸು ಮತ್ತು ಮಾಯೆ ಕುರಿತು ಹೇಳುವಲ್ಲಿ ಹೀಗೆ ನುಡಿಯುತ್ತಾರೆ:

**"ಹೊನ್ನು ಮಾಯೆ ಎಂಬುವರು ಹೊನ್ನು ಮಾಯೆಯಲ್ಲ**
**ಹೆಣ್ಣು ಮಾಯೆ ಎಂಬುರು ಹೆಣ್ಣು ಮಾಯೆಯಲ್ಲ**
**ಮಣ್ಣು ಮಾಯೆ ಎಂಬುವರು ಮಣ್ಣು ಮಾಯೆಯಲ್ಲ**
**ಮನದ ಮುಂದಣ ಆಸೆಯೆ ಮಾಯೆ ಕಾಣ ಗುಹೇಶ್ವರ"**

ಅಲ್ಲಮ ಪ್ರಭುದೇವರು ಮನಸ್ಥಿತಿಯನ್ನು ಅರಿತುಕೊಂಡವರು. ಮನಸ್ಸು ತನಗೆ ದೊರೆಯದೆ ಇದ್ದ ವಸ್ತುಗಳನ್ನೆಲ್ಲಾ ಮಾಯೆ ಎಂಬುವುದು. ಆದರೆ ನಿಜವಾದ ಮಾಯೆ ಎಂಬುವುದು ನಮ್ಮ ದೇಹದಲ್ಲಿರುವ ಮನಸ್ಸು. ಕಾಲಜ್ಞಾನಿ, ಅನುಭವ ಮಂಟಪದ ಅಧಿಪತಿ ಎಂದು ಕರೆಸಿಕೊಂಡ ಪ್ರಭುದೇವರು ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡವರು ಜೊತೆಗೆ ಮನಸ್ಸಿನ ಮೇಲೆ ಸವಾರಿ ಮಾಡಿದಂತವರು ಮನುಷ್ಯನ ಮನಸ್ಥಿತಿಯನ್ನು ಅರಿತುಕೊಂಡು ಮಾತನಾಡುವಲ್ಲಿ ಅವರ ಮಾತುಗಳು ಸತ್ಯದ ಬೆಳಕನ್ನು ತೋರಿಸುತ್ತವೆ. ಬಿಸಿಲು ಕುದುರೆ, ಮರೀಚಿಕೆ ಎಂಬ ಭಾವ ಬಿಂಬದ ಬಗ್ಗೆ ಮಾತನಾಡಿದ ಅಲ್ಲಮ ಪ್ರಭುದೇವರು ಮನಸ್ಸು ಸಂಪತ್ತನ್ನು ಬಯಸುವುದು ಹೇಗಾದರೂ ಮಾಡಿ ಸಂಪತ್ತು ಗಳಿಸಬೇಕು ಶ್ರೀಮಂತನಾಗಬೇಕು ಎಂದು ಹಾತೊರೆಯುತ್ತದೆ. ಅದು ಸಿಗದೇ ಇದ್ದಾಗ ಸಂಪತ್ತು ಮಾಯೆ ಎಂದು ಹೇಳುತ್ತದೆ. ತಾನು ಮಾರುಹೋದ ಹೆಣ್ಣಿನ ಸೌಂದರ್ಯಕ್ಕೆ

ಆಸೆಪಟ್ಟು ಆ ಹೆಣ್ಣು ಸಿಗದೇ ಇದ್ದಾಗ ಮಾಯೆ ಎಂದು ನುಡಿಯುತ್ತದೆ. ಇದಕ್ಕೂ ಮನಸ್ಸು ಮಿಗಿಲಾಗಿ ಭೂಮಿ ಬಯಸುವುದು ಭೂಮಿಗಾಗಿ ಹಲವು ಸಾಹಸದ ಕಾರ್ಯಗಳನ್ನು ಮಾಡುವುದು ಅದು ಸಿಗದೇ ಇದ್ದಾಗ ಮಣ್ಣು ಕೂಡ ಮಾಯೆ ಎಂದು ಹೇಳುವ ಈ ಮನಸ್ಸು ಚಂಚಲತೆಗೆ ಒಳಗಾಗುವುದು ಎಂದು ಅಲ್ಲಮ ಪ್ರಭುಗಳು ಹೇಳುತ್ತಾರೆ. ಈ ಎಲ್ಲಾ ವಿಷಯಗಳನ್ನು ಮೀರಿ ತನ್ನನ್ನು ತಾನು ಅರಿತುಕೊಳ್ಳದೇ ಆಸೆ ಪಟ್ಟು ಚಂಚಲತೆಗೆ ಒಳಗಾದ ಮನಸ್ಸು ಆ ಮನಸ್ಸಿನ ಆಶೆ ಮಾಯೆಯಾಗಿ ಕಾಣುವುದು ಪ್ರಭುದೇವರ ವಾಣಿಯಂತೆ ಯಾರು ಸಫಲರು ಎಂದು ಹೇಳುವಲ್ಲಿ ಆಸೆ ಅಳಿದು ಮನಸ್ಸು ಹತೋಟಿಯಲ್ಲಿಟ್ಟುಕೊಂಡು ಚಂಚಲತೆಗೆ ತುತ್ತಾಗದ ಮನಸ್ಥಿತಿಯೇ ಮೇಲು ಎಂದು ನುಡಿಯುತ್ತಾರೆ. ಪ್ರಭುದೇವರು ಮನುಷ್ಯ ಜೀವನದ ಹಲವು ನೆಲೆಗಳನ್ನು ಅರಿತುಕೊಂಡವರು. ಅದಕ್ಕಾಗಿಯೇ ಅಲ್ಲಮ ಪ್ರಭುಗಳಿಗೆ ಕಾಲ ಧ್ಯಾನಿ ಎಂದು ಕರೆಯುತ್ತಾರೆ.

**"ಅತ್ತಲಿತ್ತ ಸುತ್ತಿ ಬಳಲಿ ವ್ಯರ್ಥವಪ್ಪ ಮನಸ<br>ನಿಮ್ಮ ಚಿತ್ತದತ್ತ ಧ್ಯಾನಿಸಿ ಇರಿಸಯ್ಯ<br>ಇನ್ನು ನಿಮ್ಮತ್ತಲಲ್ಲದೆ ಅತ್ತಲಿತ್ತ ಸುತ್ತಿ ಬಂದಡೆ<br>ವಿಚಿತ್ರಮೂಲ ನಿಮ್ಮಾಣೆಯಯ್ಯಾ<br>ಕಪಿಲಸಿದ್ಧ ಮಲ್ಲಿಕಾರ್ಜುನ"**

ಸಮಾಜ ಸುಧಾರಕ, ಮಹಾಜ್ಞಾನಿ ಚಿಂತನಾ ಪ್ರವೃತ್ತಿ ಹೊಂದಿದ ಸೊನ್ನಲಿಗೆ ಸಿದ್ಧರಾಮೇಶ್ವರರು ಹೀಗೆ ನುಡಿಯುತ್ತಾರೆ. ಮಹಾನ್ ಯೋಗಿ ಎಂದು ಪ್ರಸಿದ್ಧರಾದ ಇವರು ತನ್ನ ಆರಾಧ್ಯ ದೇವನನ್ನು ಮುಖ್ಯವಾಗಿಟ್ಟುಕೊಂಡು ಇಂತಹ ವಚನಗಳನ್ನು ಹೇಳಿರುವುದು ನೋಡುತ್ತೇವೆ. ಚಂಚಲ ಮನಸ್ಸನ್ನು ಎತ್ತಲೋ ಸುಳಿಯದಂತೆ, ಅತ್ತಲಿತ್ತ ಸಂಚಾರ ಮಾಡದಂತೆ ಒಂದೇ ಕಡೆ ನಿನ್ನ ಧ್ಯಾನದಲ್ಲಿ ಮುಳುಗಿಸುವಂತೆ ಇರಿಸು ಬೇರೆ ಕಡೆ ಹರಿದಾಡಲು ಬಿಡಬೇಡ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಹಂಬಲಿಸುವರು. ಸಮಯ ಹಾಳು ಮಾಡದಂತೆ ನಿನ್ನ ಧ್ಯಾನದಲ್ಲಿಯೇ ಸದಾಕಾಲ ಮುಳುಗುವಂತೆ ಮಾಡು ಎಂದು ಬೇಡಿಕೊಳ್ಳುತ್ತಾರೆ. ನಿಮ್ಮ ಹೊರತು ಬೇರೆಯವರ ಧ್ಯಾನ ಬಯಸಿದೆ ನಾದಡಿ ನಿಮ್ಮಾಣೆಯಾಗಿ ನನ್ನ ಮನಸ್ಸು ವಿಚಿತ್ರಮೂಲವಾಗಿದೆ ಎಂದು ನಾನು ನಂಬುತ್ತೇನೆ. ಇಲ್ಲಿ ನಾನು ನಮ್ಮ ಹೊರತು ಬೇರೆ ದೇವರಿಗೆ ಬೇರೆ ಆಸೆಗೆ ಮನಸ್ಸು ಹರಿ ಬಿಡಲಾರೆ ಎಂದು ಹೇಳುತ್ತಾರೆ. ಮನಸ್ಸಿನ ಬಗ್ಗೆ ಹೆಚ್ಚು ಒತ್ತು ಕೊಟ್ಟು ಮನಸ್ಸು ಎಂಬುದು ಯಾವಾಗಲೂ ನಮ್ಮ ದೇಹದಲ್ಲಿ ಇರುವಂತೆ ಮಾಡಬೇಕು ದೇಹದಿಂದ ಬೇರ್ಪಟ್ಟ ಮನಸ್ಸು ಹಾಳಾಗುವುದು ಅದು ಯಾವಾಗಲೂ ಇಲ್ಲದ್ದನ್ನು ಬಯಸಿ ಚಂಚಲತೆಗೆ ಒಳಗಾಗುತ್ತದೆ. ತನ್ನ ಜೀವವನ್ನು ತಾನೇ ಹಾಳು ಮಾಡಿಕೊಳ್ಳುತ್ತದೆ. ಅದಕ್ಕಾಗಿ ಮನಸ್ಸಿಗೆ ಕಡಿವಾಣ ಹಾಕಬೇಕು ಎಂದು ಹೇಳುತ್ತಾರೆ. ಸಿದ್ಧರಾಮೇಶ್ವರರು ತಮ್ಮ ಮನಸ್ಸನ್ನು ಕಡಿವಾಣದಲ್ಲಿಟ್ಟುಕೊಂಡು ಸದಾಕಾಲ ಕಪಿಲಸಿದ್ಧ ಮಲ್ಲಿಕಾರ್ಜುನನ ಜ್ಞಾನದಲ್ಲಿ ಮಗ್ನರಾಗಿದ್ದರು ತಮ್ಮ ಅನುಭವದ ಮಾತುಗಳಿಂದ ಸಮಾಜವನ್ನು ಉದ್ದರಿಸುತ್ತ ಸಾಮಾನ್ಯ ವರ್ಗದ ಜನರಿಗೆ ತಿಳಿ ಹೇಳುತ್ತಾ ಸಮಾಜ ಸುಧಾರಣೆ ಮಾಡಿದರು. ಹೀಗೆ 12ನೇ ಶತಮಾನದಲ್ಲಿ ಹಲವು ಶರಣರು ತಮ್ಮ ವಿಚಾರಗಳನ್ನು ಮಂಡಿಸುತ್ತಾ ಸಮಾಜ ತಿಳಿಗೊಳಿಸುವಲ್ಲಿ ತಮ್ಮದೇ ಆದ ನಿಲುವು

ತಾಳಿರುವುದು ಕಂಡು ಬರುತ್ತದೆ . 12ನೇ ಶತಮಾನದ ಮಹಾ ಶರಣೆ ಹಡಪದ ಲಿಂಗಮ್ಮ ನವರು ಮನಸ್ಸನ್ನು ಕುರಿತು ತಮ್ಮ ಅನುಭವದ ಮಾತುಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ:

**"ತನುವ ಕರಗಿಸಿ ಹರಿವ ಮನವ ನಿಲಿಸಿ**
**ಅಂಗಗುಣವ ಅಳಿದು, ಲಿಂಗಗುಣವ ನಿಲಿಸಿ**
**ಭಾವವಳಿದು, ಬಯಕೆ ಸವಿದು, ಮಹಾದೇವನಾದ ಶರಣರ**
**ಜಗದ ಮಾನವರೆತ್ತ ಬಲ್ಲರು, ಅಪ್ಪಣ್ಣಪ್ರಿಯ ಚೆನ್ನಬಸವಣ್ಣ"**

ಹಡಪದ ಲಿಂಗಮ್ಮ ಬಸವಣ್ಣನವರಿಗೆ ಆತ್ಮೀಯರು. ಶರಣರ ಸಂಕುಲದಲ್ಲಿ ಇದ್ದು ಜಗದ ನಿಯಮ ವರಿತು ಮಾತನಾಡಿದ ಶರಣೆ. ತನ್ನ ಮನದಾಳದ ಮಾತುಗಳನ್ನು ಹೇಳುವಲ್ಲಿ ಚಂಚಲವಾದ ಮನಸ್ಸನ್ನು ಹರಿ ಬಿಡಬಾರದು, ಅದು ಮನುಷ್ಯನ ಜೀವನವನ್ನು ಹಾಳುಮಾಡುತ್ತದೆ. ಅದಕ್ಕಾಗಿ ಮನಸಿದ್ದರೆ ಮಾರ್ಗ ಎಂಬಂತೆ ಮನಸ್ಸು ದೇಹದಲ್ಲಿ ಇರುವಂತೆ ನೋಡಿಕೊಳ್ಳಬೇಕು ಎಂದು ಹೇಳುವಲ್ಲಿ ಹೀಗೆ ಮಾತನಾಡಿರುವುದು ಕಂಡು ಬರುತ್ತದೆ. ಮನುಷ್ಯನ ದೇಹದ ತನುವ ಕರಗಿಸಬೇಕು. ಆದರೆ ಮನಸ್ಸು ಹರಿಯ ಬಿಡಬಾರದು. ಚಂಚಲ ಸ್ವಭಾವಕ್ಕೆ ಒಳಗಾದರೆ ನಮ್ಮ ಜೀವನ ಶೂನ್ಯವಾಗುವುದು. ದೇಹ ಆಸೆಯ ಹಿಂದೆ ಬಿದ್ದು ಅಂದರೆ ಅಂಗಗುಣಗಳ ಈಡೇರಿಕೆಯಲ್ಲಿ ಜೀವನ ಕಳೆಯಬಾರದು. ಕಾಣದ ದೇವರಿಗಾಗಿ ಲಿಂಗ ಪೂಜೆಯನ್ನು ಮಾಡಬಾರದು. ಭಾವನೆಗಳನ್ನು ಅಳಿದು ಬಯಕೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ಇಂಥ ಗುಣಗಳನ್ನು ಹೊಂದಿದ ಶರಣ ನಮ್ಮ ಅಪ್ಪನ ಪ್ರಿಯ ಚೆನ್ನಬಸವಣ್ಣನನ್ನು ಯಾವತ್ತು ಮರೆಯಬಾರದು ಎಂದು ಹೇಳುವಲ್ಲಿ ಮನಸ್ಥಿತಿಯನ್ನು ಕುರಿತು ಹೇಳಿರುವುದು ಕಂಡು ಬರುತ್ತದೆ. ಮನಸ್ಸು ಎಂಬುವುದು ಯಾವಾಗಲೂ ಇಲ್ಲದ್ದನ್ನು ಬಯಸುತ್ತದೆ ಎಂಬುವುದು ಈ ಮೇಲಿನ ವಚನಗಳ ಸಾಲುಗಳಿಂದ ತಿಳಿದು ಬರುತ್ತದೆ.

ಚಂಚಲ ಸ್ವಭಾವ ಎಂಬುವುದರ ಬಗ್ಗೆ ಹಲವು ಕಾವ್ಯಗಳಲ್ಲಿಯೂ ವ್ಯಕ್ತವಾಗಿರುವುದು ಕಂಡುಬರುತ್ತದೆ. ಭರತ, ಭಾಮ, ದಂಡಿ, ಆನಂದ ವರ್ಧನ ಹೀಗೆ ಹಲವಾರು ಕವಿ ಮಹಾಶಯರು ಮನಸ್ಸನ್ನು ಕುರಿತು ಅಧ್ಯಯನ ಮಾಡಿರುವುದು ಈ ಮನಸ್ಸಿನ ಚಂಚಲತೆಯ ಅರಿತುಕೊಂಡು ತಮ್ಮದೇ ಆದ ನಿಲುವಿನಿಂದ ಹೇಳಿರುವುದನ್ನು ಕಾವ್ಯಗಳು ತಿಳಿಸುತ್ತವೆ. ಜಗತ್ತು ಒಳ್ಳೆಯದಾಗಿರಬೇಕಾದರೆ ಮೊದಲು ನಾವು ಒಳ್ಳೆಯವರಾಗಬೇಕು. ಅದಕ್ಕಾಗಿ ಚಂಚಲ ಮನಸ್ಸನ್ನು ಕಡಿವಾಳದಲ್ಲಿ ಇಟ್ಟುಕೊಳ್ಳಬೇಕು. ಜೊತೆಗೆ ಪರರ ಬಗ್ಗೆ, ಪರ ವಸ್ತುವಿನ ಬಗ್ಗೆ ಇಂಗಿಸದೆ ನಮ್ಮ ಜೀವನ ಮುಂದುವರಿಸಬೇಕು. ವ್ಯಾಮೋಹಕ್ಕೆ ಒಳಗಾದ ಮನಸ್ಸು ಯಾವಾಗಲೂ ಚಂಚಲತೆಯಿಂದ ಕೂಡಿರುತ್ತದೆ. ಅದಕ್ಕಾಗಿ ವ್ಯಾಮೋಹ ಬಿಡಬೇಕು ಎಂದು ಶರಣರು, ಚಿಂತಕರು, ವಿದ್ವಾಂಸರು ಹೇಳಿರುವುದನ್ನು ನೋಡುತ್ತೇವೆ. ಇನ್ನೊಂದು ವಚನದಲ್ಲಿ ಅಲ್ಲಮಪ್ರಭುಗಳು ಮನಸ್ಸು, ದೇಹ, ಲಿಂಗ ಎಂಬ ಮಾತುಗಳನ್ನಾಡುವಲ್ಲಿ ಆಸೆ, ನಾ, ನಿ ಎಂಬ ಚಂಚಲ ಸ್ವಭಾವ ಕುರಿತು ಹೇಳಿರುವುದು ನೋಡುತ್ತೇವೆ:

**"ಅಂಗದ ಮೇಲೆ ಲಿಂಗ, ಲಿಂಗದ ಮೇಲೆ**
**ಅಂಗವಿದೇನೊ? ಮನದ ಮೇಲೆ ಅರಿವು ಅರಿವಿನ**

**ಮೇಲೆ ಕುರುಹು ಇದೇನೋ? ನೀನೆಂಬಲ್ಲಿ ನಾನು,**
**ನಾನೆಂಬಲ್ಲಿ ನೀನು 'ನೀ'ನಾ ಎಂಬುದೆ? ತೆರಹಿಲ್ಲ ಗುಹೇಶ್ವರ"**

ಹೀಗೆ ಚಂಚಲತೆ ಎಂಬುವುದು ವಿಚಾರಗಳ ಹಿಂದೆ ಬಿದ್ದು ಆಸೆ ಪಡುವುದು. ಇದರಿಂದ ಮನುಷ್ಯ ಜೀವನದ ಬದುಕು ಸಾರ್ಥಕ ಆಗಲಾರದು. ನಮ್ಮ ಜೀವನ ಸ್ವಾರ್ಥಕ ಆಗಬೇಕಾದರೆ ನಾವು ಮೊದಲು ಚಂಚಲತೆಯಿಂದ ಮುಕ್ತರಾಗಬೇಕು. ಮನಸ್ಸನ್ನು ಕಡಿವಾಣದಲ್ಲಿಟ್ಟುಕೊಳ್ಳಬೇಕು, ಗರ್ವ ಅಹಂಕಾರ ಬಿಡಬೇಕು, ನನ್ನನ್ನು ತಾನು ಅರಿಯಬೇಕು. ಅಂದಾಗ ಮಾತ್ರ ಅವನ ಜೀವನ ಪರಿಪೂರ್ಣವಾಗುವುದು. ದೇಹದ ಮೇಲೆ ಲಿಂಗವನ್ನು ಕಟ್ಟಿಕೊಂಡು ಆ ಲಿಂಗದಲ್ಲಿ ಮತ್ತೊಂದು ಲಿಂಗವನ್ನು ಇರಿಸಿಕೊಂಡು ಲಿಂಗ ಪೂಜೆ ಮಾಡಿದರೆ ಏನು ಫಲ? ತನ್ನನ್ನು ತಾನು ಅರಿಯದೆ ಇನ್ನೊಬ್ಬರ ಬಗ್ಗೆ ಚಿಂತಿಸದೇ ದೇವರ ಬಗ್ಗೆ ತಿಳಿಯದೆ ನಾನು ಎಂಬ ಗರ್ವ ಅಹಂಕಾರದಿಂದ ಮೆರೆಯುವ ಮನುಷ್ಯರನ್ನು ಕುರಿತು ಹೇಳಿರುವುದು ಈ ವಚನಗಳಿಂದ ತಿಳಿದು ಬರುತ್ತದೆ. ಮನುಷ್ಯ ದೇವರ ಸಾನಿಧ್ಯಕ್ಕೆ ಹೋಗಬೇಕಾದರೆ ಮೊದಲು ತನ್ನನ್ನು ತಾನು ಕರಿಯಬೇಕು. ಪರರ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದಬೇಕು. ಆಗ ಮಾತ್ರ ದೇವರ ಸಾನಿಧ್ಯ ದೊರೆಯಲು ಸಾಧ್ಯವಿದೆ. ಅಲ್ಲಮಪ್ರಭುಗಳು ಹೇಳುವ ಹಾಗೆ ಒಂದು ಲಿಂಗವನ್ನು ಕಟ್ಟಿಕೊಂಡು ಪೂಜೆ ಮಾಡಿ ಅದರ ಫಲ ಬಯಸಿದರೆ ಸಿಗಲಾರದು ಎಂದು ಹೇಳುತ್ತಾರೆ. ಮನಸ್ಸನ್ನು ಆಳಿದ ವ್ಯಕ್ತಿಗಳು ಗುರುವಾಗುತ್ತಾರೆ, ದೇವರಾಗುತ್ತಾರೆ, ಸಂತರಾಗುತ್ತಾರೆ, ಶರಣರಾಗುತ್ತಾರೆ, ಮಹಾನ್ ಭಕ್ತರಾಗುತ್ತಾರೆ. ಜಗತ್ತಿನ ನೇಮವನ್ನು ಅರಿತು ಜೀವಿಸಿದವನೇ ಮೇಲು ಎಂದು ಹಲವು ಶರಣರು ನುಡಿಯುತ್ತಾರೆ. ಯಾರ ಮನಸ್ಸು ಆಸೆಗೆ ಒಳಗಾಗುವುದಿಲ್ಲವೋ ಅವರು ಈ ಜಗತ್ತನ್ನು ಗೆಲ್ಲಬಹುದು ಎಂದು ಹಲವು ವಿದ್ವಾಂಸರು, ಚಿಂತಕರು, ಶರಣರು, ಮೇಧಾವಿಗಳು ಹೇಳಿರುವುದು ನೋಡುತ್ತೇವೆ.

## ಪರಾಮರ್ಶನ ಗ್ರಂಥಗಳು:


1. ಕಲಬುರ್ಗಿ ಎಂ. ಎಂ. (ಸಂ). (2020). ಸಮಗ್ರ ವಚನ ಸಂಪುಟಗಳು. ಡಾ.ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ. ವಿಜಯಪೂರ.
2. ಬಸವರಾಜ ಸಬರದ. (2020). ವಚನ ಚಳುವಳಿ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು. ಬೆಂಗಳೂರು.
3. ಚಿದಾನಂದ ಮೂರ್ತಿ ಎಂ. (2013). ವಚನ ಸಾಹಿತ್ಯ. ಸಪ್ನ ಬುಕ್ ಹೌಸ್. ಬೆಂಗಳೂರು.
4. ಮಹಾಂತ ಸ್ವಾಮೀಜಿ ಮುದುಗಲ್ಲ. (2018). ವಚನ ಪ್ರಜ್ಞೆ. ಶ್ರೀನಿಧಿ ಪಬ್ಲಿಕೇಶನ್. ಬೆಂಗಳೂರು.
5. ಬಸವರಾಜ ಎಲ್. (ಸಂ). (1963). ಶಿವದಾಸ ಗೀತಾಂಜಲಿ. ಜಗದ್ಗುರು ಶ್ರೀ ಶಿವರಾತ್ರೇಶ್ವರ ಗ್ರಂಥಮಾಲ. ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.